# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಚಿಕ್ಕೋಡಿ (ದ) ವಲಯ

**ನಂ.ಶಿ 1/ಹೊ.ಪ್ರಾ.ಶಾ/1 ನೇ ತರಗತಿ/2005-2006** 18/5/2006

## ಜ್ಞಾಪನ

**ವಿಷಯ** :-2006-07ನೇ ಸಾಲಿನಲ್ಲಿ ಕೆ.ಎಲ್.ಇ ಶಿಕ್ಷಣ ಸಂಸ್ಥೆ ಬೆಳಗಾಂವ ಇವರು ಅಂಕಲಿ
ಗ್ರಾಮದಲ್ಲಿ ಅನುದಾನ ರಹಿತ ಕನ್ನಡ ಮತ್ತು ಮಧ್ಯಮ
ಶಾಶ್ವತ ಅನುದಾನರಹಿತ ಶಾಲೆ ಪ್ರಾರಂಭಿಸಲು ಅನುಮತಿ ಕೊಡುವ ಕುರಿತು

**ಉಲ್ಲೇಖ**-1)ಕಾರ್ಯದರ್ಶಿಗಳು ಕೆ.ಎಲ್.ಇ ಶಿಕ್ಷಣ .ಸೊಸಾಯಿಟಿ ಇವರ ಪ್ರಸ್ತಾವನೆ
ದಿನಾಂಕ 8-3-2006

ಮೇಲಿನ ವಿಷಯ ಹಾಗು ಉಲ್ಲೇಖದನ್ವಯ ಕೆ.ಎಲ್.ಇ ಶಿಕ್ಷಣ ಸಂಸ್ಥೆ ಬೆಳಗಾಂವ ಇವರು ಅಂಕಲಿ ಗ್ರಾಮದಲ್ಲಿ 2006-07 ನೇ ಸಾಲಿನಿಂದ ಶಾಶ್ವತ ಅನುದಾನ ರಹಿತ ಕನ್ನಡ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಅನುಮತಿ ಕೋರಿ ಪ್ರಸ್ತಾವಣೆಯನ್ನು ಸಲ್ಲಿಸಿರುತ್ತಾರೆ ಸದರಿ ಪ್ರಸ್ತಾವಣೆಯನ್ನು ಪರಿಶೀಲಿಸಲಾಗಿ ಸಮಗ್ರ ಶಿಕ್ಷಣ ಮಸೂದೆ ಪ್ರಕಾರ 1.ನೇ ತರಗತಿಯಿಂದ 4.ನೇ ತರಗತಿಯ ಆರಂಭಕ್ಕೆ ನೊಂದಣಿ ಮಾಡಿಕೊಳ್ಳುವ ಅಧಿಕಾರ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇದು ಅನುದಾನ ಸಂಹಿತೆಯ ನಿಯಮದನ್ವಯ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಶಾಶ್ವತ ಅನುದಾನ ರಹಿತವಾಗಿ 1 ನೇ ತರಗತಿ ಪ್ರಾರಂಭಿಸಲು ಅನುಮತಿ ನೀಡಲಾಗಿದೆ

| | | | |
|---|---|---|---|
| 1.ನೇ ತರಗತಿ | 2006-07 | 2.ನೇ ತರಗತಿ | 2007-08 |
| 3.ನೇ ತರಗತಿ | 2008-09 | 4.ನೇ ತರಗತಿ | 2009-10 |

1) ಅನುದಾನ ಸಂಹಿತೆಯ ನಿಯಮಗಳಿಗೆ ಅನುಗುಣವಾಗಿ ಸ್ವಂತವಾದ ಕಟ್ಟಡ, ಆಟದ ಮೈದಾನ, ಪಿಠೋಪಕರಣ, ಪಾಠೋಪಕರಣಗಳನ್ನು ಶಾಲೆಗೆ ಒದಗಿಸತಕ್ಕದ್ದು
2) ಶಾಲೆಯಲ್ಲಿ ಅರ್ಹ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡು ಇಲಾಖೆ ಅನುಮೋದನೆ ಪಡೆಯುವದು
3) ಹೆಚ್ಚಿನ ವರ್ಗಗಳನ್ನು ಹಾಗೂ ವಿಭಾಗಗಳನ್ನು ಇಲಾಖೆ ಪೂರ್ವಾನುಮತಿಯಿಲ್ಲದೆ ತೆಗೆಯತಕ್ಕದ್ದಲ್ಲ
4) ಶಾಲೆಯ ಮಾನ್ಯತೆಯನ್ನು ಪ್ರತಿ ವರ್ಷ ತಪ್ಪದೆ ನಿಗದಿತ ವೇಳೆಯಲ್ಲಿ ಪಡೆಯತಕ್ಕದ್ದು
5) ಶಾಲೆಯ ವಾರ್ಷಿಕ ತಪಾಸಣೆಯನ್ನು ಪ್ರತಿ ವರ್ಷ ತಪ್ಪದೆ ನಿಗದಿತ ವೇಳೆಯಲ್ಲಿ ಪಡೆಯತಕ್ಕದ್ದು
6) ವಿದ್ಯಾರ್ಥಿಗಳ ಪಟದ ಹಾಗೂ ದಾಖಲಾತಿ ಸಂಖ್ಯೆಯನ್ನು ಗಮನಾರ್ಹವಾಗಿ ಹೆಚ್ಚಿಸಿ ಇಲಾಖೆಯಿಂದ ನಿಗದಿಪಡಿಸಿದ ಪಠ್ಯ ಪುಸ್ತಕಗಳನ್ನು ಅನುಸರಿಸತಕ್ಕದ್ದು
7) ಪ್ರತಿ ತಿಂಗಳು ಮಕ್ಕಳ ದಾಖಲಾತಿ-ಹಾಜರಾತಿ ವರದಿಯನ್ನು ಕೇಂದ್ರ ಶಾಲೆಗಳಿಗೆ ಒಪ್ಪಿಸತಕ್ಕದ್ದು
8) ಶಾಲೆಯನ್ನು ಪ್ರಾರಂಭಿಸಿದ ದಿನಾಂಕವನ್ನು ಸಹ್ಹ ಕಛೇರಿಗೆ ವರದಿ ಸಲ್ಲಿಸತಕ್ಕದ್ದು
9) ರೂ.10000=00 ನ್ನು ಸಂಸ್ಥೆಯ ಅಧ್ಯಕ್ಷರ ಹಾಗೂ ಬಿ.ಇ.ಒ. ಇವರ ಜಂಟಿ ಹೆಸರಿನಲ್ಲಿ ಸಾ ್ಯಬಿಲಿಟಿ ಪಂಡ ಇಡತಕ್ಕದ್ದು

ದಿನಾಂಕ 1/6/2006 ರಿಂದ ಜಾರಿಗೆ ಬರುವಂತೆ ಸದರಿ ಆದೇಶವನ್ನು ನೀಡಲಾಗಿದೆ

ಕಾರ್ಯದರ್ಶಿಗಳು ಕೆ.ಎಲ್.ಇ ಶಿಕ್ಷಣ
ಸಂಸ್ಥೆ ಬೆಳಗಾಂವ. ಸ್ಥಳೀಯ ಆಡಳಿತ ಮಂಡಳಿ
ಅಂಕಲಿ ತಾ:-ಚಿಕ್ಕೋಡಿ

(ಶ್ರೀ.ಎಂ.ಬಿ.ಬೆಕ್ಕಿನವರ)
ಕ್ಷೇತ್ರ ಶಿಕ್ಷಣಾಧಿಕಾರಿಗಳು
[illegible]

K.L.E. Society's
S.S.K. COMP. PRE-UNIVERSITY
COLLEGE, ANKALI - 591 213
20 MAY 2006
INWARD No.: 260

20/5/06